**ದಿನಾಂಕ: 27.06.2022ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಬ್ರಾಡ್ ಬ್ಯಾಂಡ್ ಸಮಿತಿಯ 2ನೇ ಸಭೆಯ ಸಭಾ ನಡವಳಿಗಳು.**

ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ರಾಜ್ಯ ಬ್ರಾಡ್ ಬ್ಯಾಂಡ್ ಸಂಬಂಧಿಸಿದಂತೆ ROW ಸಮಸ್ಯೆಗಳ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ ಈ ಕೆಳಕಂಡ ಸೂಚನೆಗಳನ್ನು ನೀಡಲಾಯಿತು.

**ಕ್ರಮ ಕೈಗೊಳ್ಳಬೇಕಾದ ವಿಷಯಗಳು ಈ ಕೆಳಕಂಡಂತಿವೆ:**

| **ಕ್ರಮ ಸಂಖ್ಯೆ** | **ವಿಷಯ** | **ತೆಗೆದುಕೊಳ್ಳಬೇಕಾದ ಕ್ರಮ** | **ಸಂಬಂಧಪಟ್ಟ ಇಲಾಖೆ** |
|---|---|---|---|
| 1 | ಬಾಕಿ ಇರುವ ROW ಅರ್ಜಿಗಳ ವಿಲೇವಾರಿ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಬಿ.ಬಿ.ಎಂ.ಪಿ ಇಲಾಖೆಗಳು ROW (ದೂರಸಂಪರ್ಕ ಗೋಪುರ ಮತ್ತು OFC) ಸಂಬಂಧ ಬಾಕಿ ಇರುವ ಅರ್ಜಿಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಮತ್ತು ಎಲ್ಲಾ ಬಾಕಿ ಇರುವ ಅರ್ಜಿಗಳನ್ನು ಆದ್ಯತೆಯ ಮೇಲೆ ವಿಲೇವಾರಿ ಮಾಡಲು ಮುಖ್ಯ ಕಾರ್ಯದರ್ಶಿರವರು ಸೂಚಿಸಿದರು. | 1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ<br>2. ಬಿ.ಬಿ.ಎಂ.ಪಿ<br>3. ಪೌರಾಡಳಿತ ನಿರ್ದೇಶನಾಲಯ |
| 2 | ಏಕಗವಾಕ್ಷಿ ಪೋರ್ಟಲ್ (Single window portal) | 1.ROW ಏಕಗವಾಕ್ಷಿ ಪೋರ್ಟಲ್‌ಅನ್ನು ಅಭಿವೃದ್ಧಿಪಡಿಸಲು ಇ-ಆಡಳಿತ (DPAR) ಇಲಾಖೆಯೊಂದಿಗೆ ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಬಿ.ಬಿ.ಎಂ.ಪಿ ಇಲಾಖೆಗಳು ಸಹಕರಿಸಿ ರಾಜ್ಯದ ROW ಏಕಗವಾಕ್ಷಿ ಪೋರ್ಟಲ್‌ಅನ್ನು ಈ ಕೂಡಲೇ ಅಭಿವೃದ್ಧಿಪಡಿಸಲು 07-June -2022 ರಂದು ನಡೆದ ಸಭೆಯಲ್ಲಿ ಈಗಾಗಲೇ ಆದೇಶಿಸಿದೆ. ಅದರಂತೆ , ಈ ಕುರಿತು ಆದ್ಯತೆ ಮೇರೆಗೆ ಇಲಾಖೆಗಳು ಕ್ರಮವಹಿಸಿ ಜುಲೈ ರೊಳಗೆ ಪೋರ್ಟಲ್ ಅಭಿವೃದ್ಧಿಪಡಿಸಲು ಸೂಚಿಸಿದೆ. | 1. ನಗರಾಭಿವೃದ್ಧಿ ಇಲಾಖೆ<br>2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ<br>3. ಬಿ.ಬಿ.ಎಂ.ಪಿ<br>4. ಇ-ಆಡಳಿತ ಇಲಾಖೆ<br>5. ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ(to co-ordinate) |

| | | | |
|---|---|---|---|
| | | 2.ಅಸ್ತಿತ್ವದಲ್ಲಿರುವ ಟವರ್ ಅಥವಾ Infrastructure ಅನ್ನು ನೋಂದಾಯಿಸಲು ಏಕಗವಾಕ್ಷಿ ಪೋರ್ಟಲ್ ಅಭಿವೃದ್ಧಿ ಹಂತದಲ್ಲಿ ಇರುವ ಕಾರಣ, ಪೋರ್ಟಲ್ ಅಭಿವೃದ್ಧಿಗೊಂಡ ನಂತರ 6 ತಿಂಗಳ ಹೆಚ್ಚುವರಿ ಸಮಯವನ್ನು DOT ರವರು ಇಲಾಖೆಗಳಿಗೆ ಕೋರಿರುವಂತೆ ಸಮಯ ನೀಡಲು ಮುಖ್ಯ ಕಾರ್ಯದರ್ಶಿ ರವರು ನಗರಾಭಿವೃದ್ಧಿ ಇಲಾಖೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ಸೂಚಿಸಿದರು. | 1. ನಗರಾಭಿವೃದ್ಧಿ ಇಲಾಖೆ<br>2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ |
| 3 | ಏಕಗವಾಕ್ಷಿ ಪೋರ್ಟಲ್ ನಲ್ಲಿ ಕಾರ್ಯಾಚರಣೆಯ ಸಮಸ್ಯೆಗಳು (Single window portal) | DoT ರವರು ಕೇಂದ್ರದ ROW ನೀತಿಯ ಪ್ರಕಾರ ರಾಜ್ಯದ ROW ಏಕಗವಾಕ್ಷಿ ಪೋರ್ಟಲ್ ನಲ್ಲಿ ಈ ಕೆಳಕಂಡ ವಿಷಯವನ್ನು ಅಳವಡಿಸಲು ಕೋರಿರುತ್ತಾರೆ:<br>1. E-Khata/PID ಕಡ್ಡಾಯದ ಬದಲಿಗೆ ನಿಯಮದಲ್ಲಿ ಸೂಚಿಸಿರುವ ದಾಖಲೆಗಳನ್ನು ಆಯ್ಕೆಗಳಾಗಿ ನೀಡುವುದು<br>2. Online payment gateway ನ್ನು ಏಕಗವಾಕ್ಷಿ ಪೋರ್ಟಲ್ ನಲ್ಲಿ ಕೂಡಲೆ ROW ನಿಯಮಾನುಸಾರ<br>ಅಳವಡಿಸಲು ಸೂಚಿಸಿದೆ. | 1. ನಗರಾಭಿವೃದ್ಧಿ ಇಲಾಖೆ<br>2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ<br>3. ಬಿ.ಬಿ.ಎಂ.ಪಿ<br>4. ಇ-ಆಡಳಿತ ಇಲಾಖೆ |

| | | | |
|---|---|---|---|
| | | 3. ಡೀಮ್ಡ್ ಅನುಮೋದನೆ ವೈಶಿಷ್ಟ್ಯಗಳು ಮತ್ತು ತಿರಸ್ಕರಿಸಿದ ಅರ್ಜಿಗಳ ಕಾರಣವನ್ನು ಏಕಗವಾಕ್ಷಿ ಪೋರ್ಟಲ್ ನಲ್ಲಿ ಅಳವಡಿಸಲು ಸೂಚಿಸಿದೆ.<br><br>ಈ ಮೇಲ್ಕಂಡ ವಿಷಯವನ್ನು ಅಧಿಸೂಚಿತ ROW ನಿಯಮಗಳಲ್ಲಿ ಉಲೇಖಿಸಿರುವ ಏಕ ಗವಾಕ್ಷಿ ಪೋರ್ಟಲ್ ನಲ್ಲಿ ಅಳವಡಿಸಲು ಮುಖ್ಯ ಕಾರ್ಯದರ್ಶಿ ರವರು ನಗರಾಭಿವೃದ್ದಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಿ.ಬಿ.ಎಂ.ಪಿ ಹಾಗು ಇ-ಆಡಳಿತ ಇಲಾಖೆಯವರಿಗೆ ಸೂಚಿಸಿದರು. | |
| 4 | ಕೇಂದ್ರದ ಕರಡು ROW ನೀತಿಯಲ್ಲಿ ಪರಿಶೀಲಿಸಿ ರಾಜ್ಯದಿಂದ ಸಲಹೆಯನ್ನು ನೀಡುವ ಕುರಿತು | ದೂರಸಂಪರ್ಕ ಇಲಾಖೆ D.O ಸಂಖ್ಯೆ. 2-1/2022-ದಿನಾಂಕ: 4ನೇ ಏಪ್ರಿಲ್, 2022 ರಂದು ಕರಡು RoW ನೀತಿ ಜೊತೆಗೆ 5G Roll out (state Government support for the use of Infrastructures, poles and street furniture to setup small cells which can support 5G network) ಸಂಬಂಧ ದೂರಸಂಪರ್ಕ ಮೂಲಸೌಕರ್ಯ ಸ್ಥಾಪನೆಗಾಗಿ ಮಾರ್ಗಸೂಚಿಗಳು ರಾಜ್ಯದ ಅಭಿಪ್ರಾಯ ಮತ್ತು ಸಲಹೆಗಳನ್ನು ಕೋರಿರುವ ಸಂಬಂಧ RDPR ಮತ್ತು UDD ಸಲ್ಲಿಸಿರುವ ಮಾಹಿತಿಯನ್ನು ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು DOT ರವರಿಗೆ ಸಲ್ಲಿಸಲು ಸೂಚಿಸಿದೆ. | ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ |

| | | | |
|---|---|---|---|
| 5 | Enactment of ROW Policy of ನಗರಾಭಿವೃದ್ಧಿ ಇಲಾಖೆ & ಗ್ರಾಮೀಣಾಭಿವೃದ್ಧಿ ಮತ್ತುಪಂಚಾಯತ್ ರಾಜ್ ಇಲಾಖೆ | ಭಾರತ ಸರ್ಕಾರದ ROW ಅಧಿಸೂಚನೆಗೆ ಅನುಗುಣವಾಗಿ ಓವರ್‌ಹೆಡ್ OFC ಅಪ್ಲಿಕೇಶನ್ ಶುಲ್ಕ ಪ್ರತಿ ಕಿ.ಮೀಗೆ ರೂ 1000/- ವಿಧಿಸಲು ಮತ್ತು ವಿವಾದ ಪರಿಹಾರ ಕಾರ್ಯವಿಧಾನ (DRM) ವಿಧಿಸಲು DoT ರವರು ವಿನಂತಿಸಿರುತ್ತಾರೆ. ಈ ಸಂಬಂಧ ROW ನಿಯಮಗಳಲ್ಲಿ ತಿದ್ದುಪಡಿ ಮಾಡಲು ಸೂಕ್ತ ಕ್ರಮವಹಿಸಲು ನಗರಾಭಿವೃದ್ಧಿ ಇಲಾಖೆ & ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸೂಚಿಸಿದೆ. | 1. ನಗರಾಭಿವೃದ್ಧಿ ಇಲಾಖೆ<br>2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ |
| 6 | ರಾಜ್ಯದಲ್ಲಿ UNCOVERED ಗ್ರಾಮಗಳ ನೆಟ್‌ವರ್ಕ್ ವ್ಯಾಪ್ತಿ (coverage) ಕುರಿತು | ಕರ್ನಾಟಕದಲ್ಲಿ 27397 (97.94%) ಜನಗಣತಿಯಲ್ಲಿ 26833 ಜನವಸತಿ ಗ್ರಾಮಗಳು ಜೂನ್-2022 ರಂತೆ ಮೊಬೈಲ್ ಸೇವೆಗೆ ಒಳಪಟ್ಟಿವೆ ಎಂದು DoT ತಿಳಿಸಿದೆ.<br>DO ಪತ್ರ ಸಂಖ್ಯೆ:11-09/2021-TD-ಭಾಗ (1) ದಿನಾಂಕ 25ನೇ ಜನವರಿ-22 ರಂದು ಕಾರ್ಯದರ್ಶಿ (T) ಅವರು ಕರ್ನಾಟಕದಲ್ಲಿ ಮೊಬೈಲ್ ಸಂಪರ್ಕ ಹೊಂದದಿರದ ಗ್ರಾಮವನ್ನು ಗುರುತಿಸಲು ಕೋರಿದ್ದು ಈ ಸಂಬಂಧ ಅಂತಿಮ ಗ್ರಾಮ ಪಟ್ಟಿಯನ್ನು 04-07-2022 ರೊಳಗೆ DoTಗೆ ದೃಢೀಕರಿಸಿ ಒದಗಿಸಲು ಪಂಚಾಯತ್ ರಾಜ್ ಇಲಾಖೆಗೆ ಆದೇಶಿಸಿದೆ. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ |
| 7 | ಭಾರತ್ ನೆಟ್ ಯೋಜನೆ ಕುರಿತು | ಪಿಪಿಪಿ ಮಾದರಿಯ ಮೂಲಕ ಭಾರತ್‌ನೆಟ್‌ಗಾಗಿ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸಲು ಮತ್ತು ಗ್ರಾಮ ಪಂಚಾಯತ್‌ಗಳನ್ನು ಮೀರಿ ಭಾರತ್‌ನೆಟ್ ವ್ಯಾಪ್ತಿಯನ್ನು ಎಲ್ಲಾ ಗ್ರಾಮಗಳಲ್ಲಿ ಭಾರತನೆಟ್ ಹೆಚ್ಚಿಸಲು DoT ರವರು Additional MOU execute | ಇ-ಆಡಳಿತ ಇಲಾಖೆ |

| | | | |
|---|---|---|---|
| | | ಮಾಡಲು ಕೋರಿರುತ್ತಾರೆ ಮತ್ತು ಈ ಸಂಬಂಧ ಇ-ಆಡಳಿತ ಇಲಾಖೆ (E-Governance) ಇಲಾಖೆಯು ಪರಿಶೀಲಿಸಿ ಮುಂದಿನ ಕ್ರಮ ವಹಿಸಲು ಸೂಚಿಸಿದೆ. | |
| 8 | OFC ಫೈಬರ್ ಕಟ್ ಕುರಿತು | ಬಿ.ಬಿ.ಎಂ.ಪಿ. ಪ್ರದೇಶದಲ್ಲಿ ಓವರ್‌ಹೆಡ್ OFC ಅನ್ನು ಬಿ.ಬಿ.ಎಂ.ಪಿ. ಮತ್ತು ಬೆಸ್ಕಾಂ ಕಡಿತಗೊಳಿಸದಂತೆ COAI ಕೋರಿರುತ್ತಾರೆ ಮತ್ತು ಈ ಸಂಬಂಧ ಬಿ.ಬಿ.ಎಂ.ಪಿ. ಮತ್ತು ಬೆಸ್ಕಾಂರವರು ತಮ್ಮ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಗೆ OFC ಫೈಬರ್ ಕಟ್ ಮಾಡುವ ಮೊದಲು TSPs/ISPs ಗಳಿಗೆ ಪೂರ್ವ ಸೂಚನೆ ನೀಡಿ ನಂತರ ಅಗತ್ಯವಿದ್ದಲ್ಲಿ ಮಾತ್ರ OFC ಫೈಬರ್ ತೆರವುಗೊಳಿಸುವ ಕಾರ್ಯವನ್ನು ಕೈಗೊಳ್ಳಲು ಸೂಚಿಸಿದೆ. | 1. ಬಿ.ಬಿ.ಎಂ.ಪಿ<br>2. ಬೆಸ್ಕಾಂ |

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ವಂದಿತಾ ಶರ್ಮಾ)**
ಸರ್ಕಾರದ ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ

**ಪ್ರತಿ:**

1. ಮುಖ್ಯ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿಗಳ ಶಾಖೆಯ ಮಾಹಿತಿಗಾಗಿ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ
3. ಸರ್ಕಾರ ಅಪರ ಮುಖ್ಯಕಾರ್ಯದರ್ಶಿ, ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
6. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ - ಆಡಳಿತ).
7. ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು-560002
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

9. ನಿರ್ದೇಶಕರು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆ.
10. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ.
11. ನಿರ್ದೇಶಕರು, ಬೆಸ್ಕಾಂ
12. ಸಲಹೆಗಾರ/ ಹಿರಿಯ ಸಲಹೆಗಾರು, DDG of DoT, Licensed Service Area (LSA), ಕರ್ನಾಟಕ
13. ಮುಖ್ಯ ಪ್ರಧಾನ ವ್ಯವಸ್ಥಾಪಕರು, ಬಿ.ಎಸ್.ಎನ್.ಎಲ್, ಬೆಂಗಳೂರು
14. ಮುಖ್ಯ ಪ್ರಧಾನ ವ್ಯವಸ್ಥಾಪಕರು, ಬಿ.ಬಿ.ಎನ್.ಎಲ್
15. ವ್ಯವಸ್ಥಾಪಕ ನಿರ್ದೇಶಕರು, ಸಿ.ಒ. ಎ.ಐ (COAI)
16. ವ್ಯವಸ್ಥಾಪಕ ನಿರ್ದೇಶಕರು, DIPA
17. ಡೆಪ್ಯೂಟಿ ಡೈರೆಕ್ಟರ್ ಜನರಲ್ – ಗ್ರಾಮೀಣ-1, DoT-LSA ಕರ್ನಾಟಕ
18. ಆಯುಕ್ತರು- ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
19. ವಿಶೇಷ ಆಯುಕ್ತರು (ಯೋಜನೆ), , ಬಿ.ಬಿ.ಎಂ.ಪಿ, ಹಡ್ಸನ್ ಸರ್ಕಲ್, ಬೆಂಗಳೂರು-560002
20. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಇ-ಆಡಳಿತ ಕೇಂದ್ರ, ಸಿಆಸುಇ (ಇ-ಆಡಳಿತ).
21. ಜಂಟಿ ನಿರ್ದೇಶಕರು, ನಗರಾಭಿವೃದ್ಧಿ ಇಲಾಖೆ , ಬೆಂಗಳೂರು.